# ಗೃಹಸ್ಥ ಧರ್ಮ ಮತ್ತು ಕರ್ಮಯೋಗ

ಸ್ವಾಮಿ ಶಾಂತಿವ್ರತಾನಂದ

ಸ್ವಾಮಿ ವಿವೇಕಾನಂದರು 'ಕರ್ಮಯೋಗ'ದಲ್ಲಿ ಗೃಹಸ್ಥರ ಧರ್ಮ, ಅವರ ಸ್ಥಾನಮಾನ, ಅವರ ಕರ್ತವ್ಯ ಇವುಗಳನ್ನು ಕುರಿತು ವಿಶದವಾಗಿ ವಿವರಿಸಿದ್ದಾರೆ. ಅವರ ವಿಚಾರಗಳ ಬಗ್ಗೆ ವಿವರಿಸಿರುವ ಲೇಖಕರು ಉತ್ತಮ ವಾಗ್ಮಿಗಳು ಮತ್ತು ಲೇಖಕರು; ಪ್ರಸ್ತುತ ಅವರು ಮೈಸೂರು ಶ್ರೀರಾಮಕೃಷ್ಣ ಆಶ್ರಮದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

೭೦-೭೫ ವರ್ಷದ ಮುದುಕನೊಬ್ಬ ದಾರಿಯ ಇಕ್ಕೆಲಗಳಲ್ಲಿ ಗುಂಡಿಯನ್ನು ತೋಡುತ್ತಿದ್ದ. ಅವನ ದೇಹವು ವಯೋಸಹಜ ಅಶಕ್ತತೆಯಿಂದ ನಡುಗುತ್ತಿತ್ತು. ಆದರೂ ಮಾವಿನ ಸಸಿಗಳನ್ನು ನೆಡಬೇಕೆಂದು ಅವನು ಗುಂಡಿಯನ್ನು ತೋಡಲು ಪ್ರಯತ್ನಿಸುತ್ತಿದ್ದ. ಅದೇ ಸಮಯದಲ್ಲಿ, ದಾರಿಯಲ್ಲಿ ರಾಜನೊಬ್ಬನು ತನ್ನ ಸೈನ್ಯದ ಜೊತೆ ರಾಜ್ಯದ ವೀಕ್ಷಣೆಗೆ ಹೋಗುತ್ತಿದ್ದನು. ಈ ಮುದುಕ ಮಾವಿನ ಸಸಿಗಳನ್ನು ನೆಡುತ್ತಿದ್ದುದನ್ನು ಕಂಡು ರಾಜನಿಗೆ ಆಶ್ಚರ್ಯ, ಆನಂದಗಳು ಏಕಕಾಲದಲ್ಲಿ ಉಂಟಾದವು. 'ಅಲ್ಲಾ, ಈ ಮುದುಕನು ಯಾವಾಗ ಸಾಯುತ್ತಾನೆ, ಯಮನು ಬಂದು ಯಾವಾಗ ಅವನ ಮನೆಯ ಬಾಗಿಲನ್ನು ತಟ್ಟುತ್ತಾನೋ ಗೊತ್ತಿಲ್ಲ. ಇಂತಹ ಇಳಿವಯಸ್ಸಿನಲ್ಲಿ ಮುದುಕನಿಗೆ ತಿನ್ನುವ ಚಪಲ. ಅದೂ ಅಲ್ಲದೇ ಇವನು ನೆಡುವ ಮಾವಿನ ಸಸಿಗಳು ಬೆಳೆದು, ಫಲ ಕೊಡಲು ಇನ್ನು ಎಷ್ಟು ವರ್ಷಗಳು ಆಗುತ್ತವೆ. ಅಲ್ಲಿಯವರೆಗೆ ತಾನು ಬದುಕಿರುತ್ತೇನೆ ಎನ್ನುವ ಭ್ರಮೆ ಈ ಮುದುಕನಿಗೆ!' ಎಂದು ರಾಜನು ಆಲೋಚಿಸುತ್ತಾನೆ.

ಹೀಗೆ ಆಲೋಚಿಸಿದ ರಾಜನು, ''ನೀವು ವಯೋವೃದ್ಧರಾಗಿದ್ದೀರಿ. ನೀವು ನೆಟ್ಟ ಮಾವಿನಗಿಡಗಳ ಹಣ್ಣನ್ನು ತಿನ್ನುತ್ತೇನೆ ಎಂಬ ವಿಶ್ವಾಸ ನಿಮಗಿದೆಯೆ?'' ಎಂದು ಪ್ರಶ್ನಿಸುತ್ತಾನೆ. ನಸುನಗುತ್ತಾ, ''ಇಲ್ಲಾ ಮಹಾರಾಜರೇ, ನಾನು ನೆಡುತ್ತಿರುವಂತಹ ಮಾವಿನ ಸಸಿಗಳಿಂದ ಹಣ್ಣನ್ನು ತಿನ್ನಬಹುದು, ತಿನ್ನುತ್ತೇನೆ ಎಂಬ ಆಲೋಚನೆಯೇ ನನಗಿಲ್ಲ'' ಎಂದನು. ರಾಜನು, ''ಹಾಗಾದರೆ ಈ ಮಾವಿನ ಸಸಿಗಳನ್ನು ಏಕೆ ನೆಡುತ್ತಿದ್ದೀರಿ?'' ಎಂದು ಪ್ರಶ್ನಿಸಿದನು. ಅದಕ್ಕೆ ಮುದುಕನು, ''ಸ್ವಾಮಿ, ಇಂದು ನಾನು, ನೀವು ತಿನ್ನುತ್ತಿರುವ ವಿವಿಧ ಹಣ್ಣುಗಳನ್ನು ನಾವು ನೆಟ್ಟ ಮರದಿಂದ ತಿನ್ನುತ್ತಿದ್ದೇವೆಯೆ?''ಎಂದು ಕೇಳಿದ. ''ಇಲ್ಲ'' ಎಂದನು ಮಹಾರಾಜ. ''ನಮ್ಮ ತಂದೆ, ಅಥವಾ ತಾತ ಅಥವಾ ಮುತ್ತಜ್ಜನು ನೆಟ್ಟ ಗಿಡಗಳು ಇಂದು ಮರಗಳಾಗಿವೆ. ಅದರಲ್ಲಿ ಬಿಡುತ್ತಿರುವ ಹಣ್ಣುಗಳನ್ನು ನಾವು ತಿನ್ನುತ್ತಿದ್ದೇವೆ. ಅವರ್‍ಯಾರೂ ಅವರಿಗೋಸ್ಕರ ಮರಗಳನ್ನು ನೆಡಲಿಲ್ಲ. ಅದೇ ರೀತಿ ನಾನು ಇಂದು ನೆಡುವ ಸಸಿಗಳು ಮುಂದೆ ಮರವಾಗಿ ಹಣ್ಣುಗಳು ಬಿಡುತ್ತವೆ. ಅಂದು ನಮ್ಮ ಮಕ್ಕಳು ಅಥವಾ ಮೊಮ್ಮಕ್ಕಳು, ಅಥವಾ ಮುಂದಿನ ಸಂತತಿಯು ಅದರ ಫಲವನ್ನು ಉಣ್ಣುವಂತಾಗಲಿ ಎಂದು ನಾನು ಸಸಿಗಳನ್ನು ನೆಡುತ್ತಿದ್ದೀನಿ ಮಹಾರಾಜ'' ಎಂದನು ಮುದುಕ.



ಅವನ ಮಾತುಗಳನ್ನು ಕೇಳಿದ ಮಹಾರಾಜನು ನಾಚಿಕೆಯಿಂದ ತಲೆತಗ್ಗಿಸಿದನು. ''ನಿಮ್ಮ ವಿಶಾಲದೃಷ್ಟಿ, ದೂರದೃಷ್ಟಿಯನ್ನು ನನಗೆ ತಿಳಿಯಲಾಗಲಿಲ್ಲ, ಕ್ಷಮಿಸಿ'' ಎಂದು ಮುದುಕನಲ್ಲಿ ಪ್ರಾರ್ಥಿಸಿದನು. ಅವನ ದೂರದೃಷ್ಟಿ, ವಿಶಾಲದೃಷ್ಟಿಗಳು ನಮಗೆಲ್ಲಾ ಆದರ್ಶವಾಗಲಿ ಎಂದು ಆಸ್ಥಾನದಲ್ಲಿ ಮಂತ್ರಿ, ಸೇನಾಧಿಪತಿ, ರಾಜಪರಿವಾರದವರಿಗೆ ತಿಳಿಸಿದನು. ಈ ನಿಟ್ಟಿನಲ್ಲಿ ನಮ್ಮ ದೇಶ ನಿರ್ಮಾಣವಾಗಲಿ ಎಂಬ ಕರೆಯನ್ನು ರಾಜನು ಕೊಟ್ಟನು.

ಇಲ್ಲಿ ಮುದುಕನು ಯಾವುದೇ ಫಲಾಪೇಕ್ಷೆಯಿಲ್ಲದೆ ತನ್ನ ಕರ್ತವ್ಯವನ್ನು ನಿರ್ವಹಿಸುತ್ತಿದ್ದನು. ಅವನು ಕರ್ಮಯೋಗವನ್ನು

ಅನುಷ್ಠಾನಗೊಳಿಸಲು ಪ್ರಯತ್ನಿಸುತ್ತಿದ್ದನು. ಇದರಿಂದ ಚಿತ್ತ ಶುದ್ಧಿಯು ಅವನಿಗೆ ಉಂಟಾಗುತ್ತದೆ. ಜನನ-ಮರಣ ಚಕ್ರ ದಿಂದಲೂ ಅವನು ಪಾರಾಗಬಹುದು. ಅಂತಹ ಮನಸ್ಥಿತಿಯಿಂದ ನಾವು ಅನೇಕ ಉತ್ತಮವಾದ ಕೆಲಸಗಳನ್ನೂ ಮಾಡಬಹುದು.

## ಗೃಹಸ್ಥ ಧರ್ಮ

ಸಮಾಜದ ಆಧಾರ ಸ್ತಂಭ ಗೃಹಸ್ಥ. ಹಾಗಾದರೆ ಗೃಹಸ್ಥ ಎಂದು ಯಾರನ್ನು ಕರೆಯಬಹುದು?

ಮದುವೆಯಾಗದೆ ಇರುವ ಯುವಕ-ಯುವತಿಯರನ್ನು ಬ್ರಹ್ಮಚಾರಿ ಮತ್ತು ಬ್ರಹ್ಮಚಾರಿಣಿ ಎಂದು ಸಾಮಾನ್ಯವಾಗಿ ಕರೆಯುತ್ತಾರೆ. ಆದರೆ ಅದು ತಪ್ಪು. ಪುರುಷರು ಹಾಗೂ ಸ್ತ್ರೀಯರು ಬರೀ ಅವಿವಾಹಿತರಾಗಿದ್ದರೆ, ಅವರನ್ನು ಬ್ರಹ್ಮಚಾರಿ ಹಾಗೂ ಬ್ರಹ್ಮಚಾರಿಣಿ ಎಂದು ಕರೆಯಲು ಸಾಧ್ಯವಾಗುವುದಿಲ್ಲ. ಅವಿವಾಹಿತರಾಗಿದ್ದು, ಜ್ಞಾನಾರ್ಜನೆ ಮಾಡುತ್ತಾ, ಪವಿತ್ರ ಜೀವನ ವನ್ನು ನಡೆಸುತ್ತಾ, ಹಿರಿಯರಿಗೆ ಗೌರವ, ಕಿರಿಯರಿಗೆ ಪ್ರೀತಿ ಮುಂತಾದ ಗುಣಗಳನ್ನು ಯುವಕ-ಯುವತಿಯರು ತಮ್ಮ ಜೀವನದಲ್ಲಿ ಅನುಷ್ಠಾನ ಮಾಡಲು ಪ್ರಯತ್ನ ಮಾಡಿದಾಗ ಮಾತ್ರ ಅವರನ್ನು ಬ್ರಹ್ಮಚಾರಿ ಹಾಗೂ ಬ್ರಹ್ಮಚಾರಿಣಿ ಎಂದು ಕರೆಯಲು ಸಾಧ್ಯ.

ಅದೇ ರೀತಿ ವಿವಾಹಿತರನ್ನು ಗೃಹಸ್ಥರು, ಗೃಹಸ್ಥಾಶ್ರಮಿಗಳು ಎಂದು ಸಂಬೋಧಿಸುತ್ತಾರೆ. ಇದು ಅರ್ಧ ಸತ್ಯ. ಏಕೆಂದರೆ ವಿವಾಹಿತರೆಲ್ಲರೂ ಸಂಸಾರಿಗಳು, ಆದರೆ ಗೃಹಸ್ಥರು ಎಂದು ಹೇಳಲಾಗುವುದಿಲ್ಲ. ಹಾಗಾದರೆ ಸಂಸಾರಿ ಮತ್ತು ಗೃಹಸ್ಥನಿಗೆ ಏನು ವ್ಯತ್ಯಾಸ ಎಂಬ ಪ್ರಶ್ನೆಗೆ ನಾವು ಉತ್ತರವನ್ನು ತಿಳಿದು ಕೊಳ್ಳಬೇಕು.

'ಗೃಹ' ಮನೆ, 'ಸ್ಥ'- ವಾಸಿಸುವವನು. ಅಂದರೆ ಮನೆಯಲ್ಲಿ ವಾಸಿಸುವವನು. ಮನೆಯಲ್ಲಿ ವಾಸಿಸುವವರೆಲ್ಲರನ್ನೂ ಗೃಹಸ್ಥ ಎಂದು ಕರೆಯಬಹುದೆ? ಇಲ್ಲ. ಏಕೆಂದರೆ ಅವನಿಗೆ ಹಲವಾರು ಕರ್ತವ್ಯಗಳು, ಜವಾಬ್ದಾರಿಗಳು ಇವೆ. ಅವುಗಳನ್ನು ಪಾಲಿಸಿದಲ್ಲಿ ಮಾತ್ರ ಅವನನ್ನು ಗೃಹಸ್ಥ ಎಂದು ಕರೆಯಬಹುದು. ಅದೇ ಅವನ ಧರ್ಮ. ಇಲ್ಲಿ 'ಧರ್ಮ' ಎಂದರೆ ಕರ್ತವ್ಯ, ಜವಾಬ್ದಾರಿ, ಇತ್ಯಾದಿ. ಜನಸಾಮಾನ್ಯರು ತಿಳಿದಿರುವಂತೆ, ಈ ಅವಸ್ಥೆಯು ಬರೀ ಭೋಗಕ್ಕಾಗಿ, ಇಂದ್ರಿಯಸುಖಕ್ಕಾಗಿ ಅಲ್ಲ. ಸನಾತನ ಧರ್ಮದ ಪ್ರಕಾರ ಮನಸ್ಸಿಗೆ ಇಚ್ಛೆ ಬಂದಂತೆ ಇಂದ್ರಿಯ ಲೋಲುಪತೆಗೆ ಈ ಗೃಹಸ್ಥಾಶ್ರಮವು ಸೀಮಿತವಾಗಿಲ್ಲ.

ಗೃಹಸ್ಥರು ಸಮಾಜದ ಆಧಾರಸ್ತಂಭ ಎನ್ನುವಲ್ಲಿ, ಧರ್ಮ ಶಾಸ್ತ್ರ ಗ್ರಂಥಗಳು ಹೀಗೆ ಹೇಳುತ್ತವೆ:

**ಬ್ರಹ್ಮಚಾರೀ ಗೃಹಸ್ಥಶ್ಚ ವಾನಪ್ರಸ್ಥೋ ಯತಿಸ್ತಥಾ ।**
**ಏತೇ ಗೃಹಸ್ಥಪ್ರಭವಾಃ ಚತ್ವಾರಃ ಪೃಥಗಾಶ್ರಮಾ ॥**

'ಬ್ರಹ್ಮಚಾರೀ, ಗೃಹಸ್ಥ, ವಾನಪ್ರಸ್ಥ ಮತ್ತು ಸಂನ್ಯಾಸೀ – ಈ ನಾಲ್ಕು ಮಂದಿಯೂ ಗೃಹಸ್ಥರಿಂದಲೇ ಹೊರಬರುವುದು.'

**ಯಥಾ ವಾಯುಂ ಸಮಾಶ್ರಿತ್ಯ ಸರ್ವೇ ಜೀವಂತಿ ಜಂತವಃ ।**
**ತಥಾ ಗೃಹಸ್ಥಮಾಶ್ರಿತ್ಯ ವರ್ತಂತೇ ಸರ್ವ ಆಶ್ರಮಾಃ ॥**

'ಯಾವ ರೀತಿ ಗಾಳಿಯನ್ನು ಆಶ್ರಯಿಸಿ ಸಕಲ ಜೀವಿಗಳು ಜೀವಿಸುತ್ತವೆಯೋ, ಅದೇ ರೀತಿ ಉಳಿದ ಆಶ್ರಮದವರು ಗೃಹಸ್ಥಾಶ್ರಮಿಯನ್ನು ಆಶ್ರಯಿಸಿ ಜೀವಿಸುತ್ತಿದ್ದಾರೆ.'

ಇದರಿಂದ ಗೃಹಸ್ಥಾಶ್ರಮದ ಪ್ರಾಮುಖ್ಯತೆಯನ್ನು ನಾವು ತಿಳಿದುಕೊಳ್ಳಬಹುದು.

## ಗೃಹಸ್ಥ ಮತ್ತು ಸಂಸಾರಿ

ವಿವಾಹಿತರೆಲ್ಲ ಸಂಸಾರಿಗಳಾಗಿರಬಹುದು, ಆದರೆ ಗೃಹಸ್ಥ ರಲ್ಲ. ಏಕೆಂದರೆ ವಿವಾಹಿತರಾಗಿ, ಗೃಹಸ್ಥಾಶ್ರಮದ ಧರ್ಮವನ್ನು ಪಾಲಿಸದೆ ಇದ್ದಾಗ, ಅಂತಹವರನ್ನು ಗೃಹಸ್ಥ ಎಂದು ಕರೆಯಲು ಸಾಧ್ಯವಿಲ್ಲ. ಬದಲಾಗಿ 'ಸಂಸಾರಿ' ಎಂದು ಕರೆಯುತ್ತೇವೆ. ಇಲ್ಲಿ ಸಂಸಾರಿ ಪದವನ್ನು ಕನ್ನಡದಲ್ಲಿ ಉಪಯೋಗಿಸುವ ಅರ್ಥದ ಚೌಕಟ್ಟಿನಲ್ಲಿ ಹೇಳಲಾಗಿದೆ. ಸಂಸ್ಕೃತ ಭಾಷೆಯಲ್ಲಿ ಸಂಸಾರಿ ಪದ ವನ್ನು ಉಪಯೋಗಿಸುವಂತೆ ಅಲ್ಲ. ವಿವಾಹಿತರಾಗಿ, ಬರೀ ವಿಷಯಸುಖಗಳಿಗೆ, ಮನಸ್ಸಿಗೆ ಇಚ್ಛೆ ಬಂದಂತೆ ಜೀವನ ನಡೆ ಸುತ್ತಾ ಇರುವ ವಿವಾಹಿತರೆಲ್ಲರೂ ಸಂಸಾರಿಗಳೇ.

## ಗೃಹಸ್ಥನ ಕರ್ತವ್ಯ

ಪತಿ-ಪತ್ನಿಯರು ಗೃಹಸ್ಥಾಶ್ರಮ ಎಂಬ ಗಾಡಿಯ ಎರಡು ಚಕ್ರಗಳಿದ್ದಂತೆ. ಪತಿಯು ಪತ್ನಿಯನ್ನು ವಿಲಾಸದ ವಸ್ತುವಾಗಿ, ಕೆಲಸಗಳನ್ನು ಮಾಡುವ ಪರಿಚಾರಿಕೆ ಎಂಬ ದೃಷ್ಟಿಯಿಂದ ನೋಡ ಬಾರದು. ಬದಲಾಗಿ ಹೆಂಡತಿಯನ್ನು ಧರ್ಮಪತ್ನಿ, ಅರ್ಧಾಂಗಿ ಎಂದು ಕಾಣಬೇಕು. ಜೀವನದ, ಮನೆಯ ಜವಾಬ್ದಾರಿಗಳನ್ನು ಸುಖ-ದುಃಖ, ಕಷ್ಟ-ನಷ್ಟಗಳನ್ನು ಸಮಾನವಾಗಿ ಹಂಚಿಕೊಂಡು ಜೀವನಚಕ್ರವನ್ನು ಮುಂದೆ ಸಾಗಿಸುತ್ತಿರಬೇಕು. ಒಬ್ಬರಿಗೊಬ್ಬರು ಜೀವನದ ಎಲ್ಲ ಆಗು-ಹೋಗುಗಳಲ್ಲಿ ನೆರವಾಗುವಂತಿರಬೇಕು. ಆದ್ದರಿಂದಲೇ ಹಿಂದೂಧರ್ಮದ ವಿವಾಹ ಪದ್ಧತಿಯಲ್ಲಿ ಪತಿಯು ಎಲ್ಲರ ಸಮ್ಮುಖದಲ್ಲಿ ಪತ್ನಿಗೆ **'ಧರ್ಮೇ ಚ ನಾತಿಚರಾಮಿ, ಅರ್ಥೇ ಚ ನಾತಿಚರಾಮಿ, ಕಾಮೇ ಚ ನಾತಿಚರಾಮಿ'** ಎಂದು ವಚನವೀಯುತ್ತಾನೆ. ಅಂದರೆ ಧರ್ಮ, ಸಂಪತ್ತು, ವಿವಿಧ ಆಸೆ ಗಳನ್ನು ಪಡೆಯುವ ವಿಷಯದಲ್ಲಿ ನಾವಿಬ್ಬರೂ ಅರ್ಥಮಾಡಿ ಕೊಂಡು ಜೀವನ ನಡೆಸುತ್ತೇವೆ. ಒಬ್ಬರನ್ನೊಬ್ಬರು ಅತಿಕ್ರಮಿಸುವು ದಿಲ್ಲ ಎಂದು. ಎಂತಹ ಅದ್ಭುತವಾದ, ವಿಶಾಲವಾದ ಕಲ್ಪನೆ ಅಲ್ಲವೆ! ಅವರಿಬ್ಬರು ಆತ್ಮಸಾಕ್ಷಾತ್ಕಾರಕ್ಕೆ ಅನುಕೂಲವಾಗುವಂತಹ ರೀತಿಯಲ್ಲಿ ಜೀವನದ ಪ್ರತಿಯೊಂದು ಕಾರ್ಯವನ್ನೂ ನೆರ ವೇರಿಸಬೇಕು.

ಗೃಹಸ್ಥಾಶ್ರಮಿಯು ತಂದೆ-ತಾಯಿಗಳನ್ನು ಗೌರವದಿಂದ ಕಾಣಬೇಕು. ಅವರ ಎದುರು ದರ್ಪ, ಅಹಂಕಾರ, ಕೋಪ, ಇತ್ಯಾದಿ ಭಾವನೆಗಳನ್ನು ತೋರಿಸಬಾರದು. ಹೆಂಡತಿಯನ್ನು ಬೈಯುವುದು, ಎಲ್ಲರ ಮುಂದೆ ಅವಳನ್ನು ಅಪಹಾಸ್ಯ ಮಾಡುವುದು, ಅವಳ ಸ್ವಾಭಿಮಾನಕ್ಕೆ ಧಕ್ಕೆ ತರುವಂತಹ ಯಾವುದೇ ಕಾರ್ಯವನ್ನು ಪುರುಷನು ಮಾಡಬಾರದು. ಅದೇ ರೀತಿಯಲ್ಲಿ ಗೃಹಿಣಿಯೂ ಕೂಡ. ಇಂತಹ ಗುಣಗಳನ್ನು ವಿವಾಹಿತರು ಆಚರಿಸಿದಲ್ಲಿ ಮಾತ್ರ ಅಂತಹವರನ್ನು ಗೃಹಸ್ಥರು ಎಂದು ಕರೆಯಬಹುದು.

ಪ್ರಸ್ತುತ ಸಮಾಜದಲ್ಲಿ ಸಾಧು-ಸಂತರು, ಆಧ್ಯಾತ್ಮಿಕ ವ್ಯಕ್ತಿಗಳು ಮಾತ್ರ ಅಧ್ಯಾತ್ಮವನ್ನು ಅನುಸರಿಸಬೇಕು, ಜನಸಾಮಾನ್ಯರು ಬೇಕಾದ ರೀತಿಯಲ್ಲಿ ಜೀವನ ಮಾಡಬಹುದು, ಸುಖ-ಭೋಗಗಳನ್ನು ಆಸ್ವಾದಿಸಬಹುದು ಎಂಬ ತಪ್ಪು ಕಲ್ಪನೆ ಬೇರೂರಿದೆ. ಗೃಹಸ್ಥಾಶ್ರಮವು ಧರ್ಮಯುತವಾಗಿ ವಿಷಯ ಸುಖಗಳನ್ನು ಅನುಭವಿಸಿ, ಇಂದ್ರಿಯ-ಮನೋತೀತವಾದ ವಸ್ತುವನ್ನು ಪಡೆಯಲು ತರಬೇತಿ ಪಡೆಯುವ ಕೇಂದ್ರವಾಗಿದೆ.

ಸ್ವಾಮಿ ವಿವೇಕಾನಂದರು ಗೃಹಸ್ಥಾಶ್ರಮಿಗಳನ್ನು ಕುರಿತು, ''ಪತಿವ್ರತ ಅಥವಾ ಪತ್ನೀವ್ರತ ಧರ್ಮವೇ ಗಂಡಸು ಅಥವಾ ಹೆಂಗಸಿನಲ್ಲಿ ಇರಬೇಕಾದ ಮೊಟ್ಟಮೊದಲ ಸದ್ಗುಣವಾಗಿರುತ್ತದೆ. ವಿಶ್ವದಲ್ಲೆಲ್ಲಾ ಕೆಟ್ಟ ನಡತೆಯ ಪಶುಸ್ವಭಾವದ ಗಂಡಂದಿರು ಇರುವರೆಂದು ನಾವು ಕೇಳುತ್ತೇವೆ. ಆದರೆ ಅಷ್ಟೇ ಪ್ರಮಾಣದಲ್ಲಿ ಕೆಟ್ಟ ನಡತೆಯ, ಕೆಟ್ಟ ಸ್ವಭಾವದ ಹೆಂಗಸರು ಇರುವರೆಂಬುದೂ ಸತ್ಯವಲ್ಲವೆ? ಪರಿಶುದ್ಧತೆ ಮತ್ತು ಪತಿವ್ರತ ಅಥವಾ ಪತ್ನೀವ್ರತ ಧರ್ಮವು ಜಯಿಸಲಾರದ ದುಷ್ಟ ಸ್ವಭಾವವು ಯಾವುದಿದೆ? ಪ್ರತಿಯೊಬ್ಬ ಗಂಡಸು ತನ್ನ ಪತ್ನಿಯನ್ನು ಹೊರತುಪಡಿಸಿ ಇತರ ಗಂಡಸರನ್ನು ತಂದೆ, ಮಗ, ಸಹೋದರ ಎಂದು ಕಾಣಲಿ'' ಎಂಬುದಾಗಿ ಹೇಳಿರುವುದು ನಿಜಕ್ಕೂ ಗೃಹಸ್ಥರಿಗೆ ದಾರಿದೀಪವಾಗಿದೆ. ಇದನ್ನು ಪಾಲಿಸಿದಲ್ಲಿ ಸಮಾಜದಲ್ಲಿ ನಡೆಯುತ್ತಿರುವ ಅತ್ಯಾಚಾರ, ಅನಾಚಾರ, ಶೋಷಣೆಗಳು ಕ್ಷೀಣಿಸುತ್ತವೆ ಎಂಬುದು ಖಚಿತ.

ಶುದ್ಧಸತ್ವರು, ಆಧ್ಯಾತ್ಮಿಕ ಮೇರುವ್ಯಕ್ತಿಯಾಗಿರುವ ಭಗವಾನ್ ಶ್ರೀರಾಮಕೃಷ್ಣ ಪರಮಹಂಸರು ಸ್ವಯಂ ಗೃಹಸ್ಥರಾಗಿದ್ದರು. ಗೃಹಸ್ಥರಾಗಿದ್ದುಕೊಂಡೇ ಹಿಂದೂಧರ್ಮದ ವಿವಿಧ ಮತ-ಪಂಥಗಳ ರೀತಿಯಲ್ಲಿ ದೇವರನ್ನು ಕಂಡರು. ಇತರ ಧರ್ಮಗಳಲ್ಲಿ ಹೇಳಿರುವಂತೆ ಆಧ್ಯಾತ್ಮಿಕ ಸಾಧನೆ ಮಾಡಿ ಸತ್ಯದ ಅನುಭವವನ್ನು ಪಡೆದರು, ಮಹಾ ಅನುಭಾವಿಯಾದರು. ಅವರು ಗೃಹಸ್ಥರಿಗೆ ಅನೇಕ ಬೋಧನೆಗಳನ್ನು ನೀಡಿದ್ದಾರೆ. ಸಂಸಾರಿಗಳೆಂದ ಮಾತ್ರಕ್ಕೆ ಅವರು ಎಲ್ಲವನ್ನೂ (ಮನಸ್ಸಿಗೆ ಬಂದಂತೆ) ಅನುಭವಿಸಬೇಕಾಗಿಲ್ಲ, ಸಂಸಾರದಲ್ಲಿರುವ ಸಾಧಕರಾದ ಗಂಡ-ಹೆಂಡತಿಯರು ಒಂದು-ಎರಡು ಮಕ್ಕಳಾದ ನಂತರ, ಅಣ್ಣ-ತಂಗಿಯರಂತೆ ಜೀವನ ನಡೆಸಬೇಕು. ಸಂಸಾರದಲ್ಲಿರುವ ದುಃಖದ ಬಗ್ಗೆ ವಿಚಾರ ಮಾಡಬೇಕು. ಸಂಸಾರದ ಅನಿತ್ಯತೆಯನ್ನು ಕಂಡುಕೊಳ್ಳಬೇಕು. ಸಂಸಾರಿಗಳಿಗೆ ಆಂತರಿಕ ತ್ಯಾಗ, ಸಂನ್ಯಾಸಿಗಳಿಗೆ ಆಂತರಿಕ, ಬಾಹ್ಯ — ಎರಡೂ ತ್ಯಾಗ ಬೇಕು.

ಗೃಹಸ್ಥನು ಹಣ, ಸಂಪತ್ತನ್ನು ಸಂಪಾದಿಸಬೇಕು. ಆದರೆ ಅದು ಧರ್ಮಸಮ್ಮತವಾಗಿರಬೇಕು. ಆಸೆಗಳನ್ನು ಕೂಡ ಧರ್ಮಯುತವಾಗಿ ತೀರಿಸಿಕೊಂಡಾಗ ಅಂತಹವನು ಮಾತ್ರ ಮೋಕ್ಷಕ್ಕೆ ಅಧಿಕಾರಿಯಾಗುತ್ತಾನೆ ಎಂದು ನಮ್ಮ ಪೂರ್ವಜರ ಅಭಿಮತ. ಆದ್ದರಿಂದ ಗೃಹಸ್ಥಾಶ್ರಮವು ಭೋಗ-ವಿಲಾಸಕ್ಕಾಗಿ ಅಲ್ಲ. ಬದಲಾಗಿ ಸಮಾಜದ ಜವಾಬ್ದಾರಿಗಳನ್ನು ನಿರ್ವಹಣೆ ಮಾಡುತ್ತಾ, ಸುಖ-ಭೋಗಗಳನ್ನು ಶಾಸ್ತ್ರಸಮ್ಮತವಾಗಿ ಅನುಭವಿಸುತ್ತಾ, ಮುಕ್ತಿಗೆ ಯೋಗ್ಯ ವ್ಯಕ್ತಿಯಾಗಲು ಗೃಹಸ್ಥಾಶ್ರಮವು ನೆರವಾಗುತ್ತದೆ.

ಗೃಹಸ್ಥ ಧರ್ಮ ಎಂದರೆ ಏನು ಎಂದು ನಾವು ತಿಳಿದುಕೊಂಡೆವು. ಈಗ ಕರ್ಮಯೋಗದ ಕುರಿತು ತಿಳಿದುಕೊಳ್ಳೋಣ.

## ಕರ್ಮವು ಅನಿವಾರ್ಯ

ಕೆಲಸಗಳನ್ನು ಮಾಡುತ್ತಿದ್ದರೂ ಸುಖ-ಶಾಂತಿಗಳು ನಮಗೆ ಸಿಗದಿರುವುದರಿಂದ ಕರ್ಮವನ್ನು ತ್ಯಜಿಸೋಣವೇ ಎಂಬ ಪ್ರಶ್ನೆಯು ಸರ್ವೇಸಾಮಾನ್ಯವಾಗಿ ಬರಬಹುದು. ಇದಕ್ಕೆ ಭಗವಾನ್ ಶ್ರೀಕೃಷ್ಣನು ಭಗವದ್ಗೀತೆಯಲ್ಲಿ **'ನ ಹಿ ಕಶ್ಚಿತ್ ಕ್ಷಣಮಪಿ ಜಾತು ತಿಷ್ಠತ್ಯಕರ್ಮಕೃತ್'** ಯಾರೊಬ್ಬರೂ ಕೆಲಸ ಮಾಡದೆ ಕ್ಷಣಕಾಲವೂ ಇರಲಾರರು ಎನ್ನುತ್ತಾನೆ. ಅಲ್ಲದೆ,

ನ ಕರ್ಮಣಾಮನಾರಂಭಾನ್ನೈಷ್ಕರ್ಮ್ಯಂ ಪುರುಷೋಽಶ್ನುತೇ ।
ನ ಚ ಸಂನ್ಯಸನಾದೇವ ಸಿದ್ಧಿಂ ಸಮಧಿಗಚ್ಛತಿ ॥

'ಕರ್ಮಗಳನ್ನು ಆರಂಭಿಸದೇ ಇರುವುದರಿಂದ ಮನುಷ್ಯನು ನೈಷ್ಕರ್ಮ್ಯವನ್ನು ಹೊಂದುವುದಿಲ್ಲ. ಮತ್ತು ಬರಿಯ ಕರ್ಮತ್ಯಾಗದಿಂದಲೇ ಸಿದ್ಧಿಯನ್ನು ಹೊಂದುವುದಿಲ್ಲ. ಆದ್ದರಿಂದ ಕರ್ಮವು ನಮ್ಮ ಜೀವನದಲ್ಲಿ ಅನಿವಾರ್ಯವಾಗಿದೆ.'

## ಕರ್ಮಯೋಗ

ಪ್ರಸ್ತುತ ನಗರಗಳಲ್ಲಿ ಬಿಡುವಿಲ್ಲದೆ ಹಗಲಿರುಳು ಪ್ರತಿಯೊಬ್ಬರೂ ಕೆಲಸದಲ್ಲಿ ಸತತವಾಗಿ ನಿರತರಾಗಿರುವುದನ್ನು ನಾವು ಕಾಣಬಹುದು. ಇದಕ್ಕೆ ನಗರ ವಾಸಿಗಳ ಜೀವನ ಶೈಲಿಯೇ ಉತ್ತಮ ನಿದರ್ಶನ. ಇಂದಿನ ಸ್ಪರ್ಧಾತ್ಮಕ ಸಮಾಜದಲ್ಲಿ ಲಿಂಗಭೇದವಿಲ್ಲದೆ, ವಯೋಮಿತಿಯಿಲ್ಲದೆ ಪ್ರತಿಯೊಬ್ಬನೂ ಅತ್ಯಂತವಾಗಿ ಶ್ರಮಿಸುತ್ತಿದ್ದಾನೆ. ವಿದ್ಯಾರ್ಥಿಗಳು ಬೆಳಗಿನಿಂದ ರಾತ್ರಿಯವರೆಗೂ ಶಾಲೆ, ಟ್ಯೂಷನ್ ಎಂದು ಬಿಡುವಿಲ್ಲದೆ ಕಾರ್ಯದಲ್ಲಿ ಮಗ್ನರಾಗಿರುತ್ತಾರೆ. ತಾಯಿ-ತಂದೆಯರು ಹಗಲಿರುಳೆನ್ನದೆ ಕಚೇರಿಗಳಲ್ಲಿ ದುಡಿಯುತ್ತಿದ್ದಾರೆ. ಎಲ್ಲಿ ನೋಡಿದರೂ ಜನರು

ಸಮಯಾಭಾವದಿಂದ, ಕೆಲಸದ ಒತ್ತಡಗಳಿಂದ ಓಡುತ್ತಿರುವುದು ನಮಗೆ ನಿತ್ಯಸಂಗತಿಯಾಗಿದೆ. ಹಾಗಿದ್ದಲ್ಲಿ ನಮಗೆ ಕರ್ಮ ಯೋಗದ ಆವಶ್ಯಕತೆಯಾದರೂ ಇದೆಯೇ ಎಂದು ಸಂದೇಹ ವುಂಟಾಗಬಹುದು. ಆದರೆ ಸದಾ ಕಾರ್ಯ ತತ್ಪರರಾಗಿದ್ದರೂ ಅಚ್ಚರಿಯ ಸಂಗತಿಯೆಂದರೆ ನೆಮ್ಮದಿ-ಶಾಂತಿಗಳ ಅಭಾವವು ನಮ್ಮ ಮನಸ್ಸನ್ನು ಕಾಡುತ್ತಿದೆ. ಅತೃಪ್ತಿಯು ಹೆಮ್ಮರವಾಗಿ ಬೆಳೆಯುತ್ತಿದೆ. ಸಂತೋಷ, ಶಾಂತಿ ಮತ್ತು ತೃಪ್ತಿಗಾಗಿ ಬೇರೆಲ್ಲೋ ಹುಡುಕುತ್ತಿದ್ದೇವೆ. ಜನರು ವಾರಾಂತ್ಯ ಮತ್ತು ರಜಾದಿನಗಳಿಗೆ ಕಾತರದಿಂದ ಕಾಯುವುದೇ ಇದಕ್ಕೆ ಸಾಕ್ಷಿ. ರಂಗಮಂದಿರಗಳು, ರೆಸಾರ್ಟ್‌ಗಳು ಇತ್ಯಾದಿ ಮನರಂಜನೆಯನ್ನು ಕೊಡುವ ಇನ್ನಿತರ ಹೊಸ ಹೊಸ ಸಾಧನಗಳನ್ನು ಹುಡುಕುತ್ತಿದ್ದಾರೆ. ಕಾರಣ ಅವರು ಮಾಡುವ ದಿನನಿತ್ಯದ ಕೆಲಸವು ಜನರಿಗೆ ಹೊರೆಯಾಗುತ್ತಿದೆ. ಅದು ಜೀವನದ ಅವಿಭಾಜ್ಯ ಅಂಗವಾಗಿರುವುದಿಲ್ಲ. ಅದಕ್ಕೆ ಕಾರಣ ನಮ್ಮಿಂದ ನಾವು ದೂರ ಸರಿಯುತ್ತಿರುವುದು. ಹಾಗೂ ಉನ್ನತ ಮೌಲ್ಯಗಳ ಕುಸಿತವೂ ಇದಕ್ಕೆ ಕಾರಣವಾಗಿದೆ. ಜನರು ಮಾಡುತ್ತಿರುವ ಕಾರ್ಯವೈಖರಿಯು ಜೀವನದ ಮೂಲಭೂತ ಸೌಕರ್ಯಗಳನ್ನು ಒದಗಿಸುತ್ತಿವೆಯೇ ಹೊರತಾಗಿ ಜೀವನಾನಂದ ವನ್ನು ನೀಡಲು ಅಸಮರ್ಥವಾಗಿದೆ. ಅನ್ನಬಟ್ಟೆಗಳನ್ನು ನೀಡು ವುದಕ್ಕಿಂತ ಮಿಗಿಲಾಗಿ, ಸ್ವಂತ ವ್ಯಕ್ತಿತ್ವವನ್ನು ರೂಪಿಸುವ ಮತ್ತು ಆತ್ಮತೃಪ್ತಿಯನ್ನು ನೀಡುವ ಸಾಮರ್ಥ್ಯ ಕರ್ಮಕ್ಕಿದೆ ಎನ್ನುವುದನ್ನು ಜನರು ಮರೆತಿದ್ದಾರೆ. ಅವರ ನೈಜ ಸ್ವರೂಪವನ್ನು ಹೊರಗಿನ ವಸ್ತುಗಳಿಂದ ಮರೆಮಾಚುತ್ತಿದ್ದಾರೆ.

### ಕರ್ಮ ಮತ್ತು ವ್ಯಕ್ತಿತ್ವದ ಮೇಲೆ ಅದರ ಪರಿಣಾಮ

**ಪುಣ್ಯೋ ವೈ ಪುಣ್ಯೇನ ಕರ್ಮಣಾ ಭವತಿ ಪಾಪಃ ಪಾಪೇನೇತಿ** *(೩.೨.೧೩)* ಎಂದು ಬೃಹದಾರಣ್ಯಕ ಉಪನಿಷತ್ತು ಸಾರು ತ್ತದೆ. ಒಳ್ಳೆಯ ಕೆಲಸಗಳಿಂದ ಮನುಷ್ಯನು ಸಜ್ಜನನಾಗುತ್ತಾನೆ; ಕೆಟ್ಟ ಕೆಲಸಗಳಿಂದ ದುಷ್ಟನಾಗುತ್ತಾನೆ.

'ಬಿತ್ತಿದಂತೆ ಬೆಳೆ' ಎಂಬ ಮಾತಿನಂತೆ ನಾವು ಮಾಡುವ ಪ್ರತಿ ಯೊಂದು ಕೆಲಸ, ಆಲೋಚನೆ ಮತ್ತು ಚಿಂತನೆಗಳೇ ನಮ್ಮ ವ್ಯಕ್ತಿತ್ವ ವನ್ನು ರೂಪಿಸುತ್ತದೆ. ಅವುಗಳ ಒಟ್ಟು ಮೊತ್ತವೇ ಒಬ್ಬ ವ್ಯಕ್ತಿಯ ಚಾರಿತ್ರ್ಯ ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ. ಅದು ಕಾಯಿಕ, ವಾಚಿಕ, ಮಾನಸಿಕ, ಬೌದ್ಧಿಕ ಇದಾವುದೇ ಆಗಿರ ಬಹುದು. ಪ್ರತಿಯೊಂದು ಕರ್ಮವೂ ತನ್ನದೇ ಆದ ಮಟ್ಟದಲ್ಲಿ ನಮ್ಮ ಜೀವನದ ಮೇಲೆ ಪರಿಣಾಮವನ್ನು ಬೀರುತ್ತದೆ.

ಸ್ವಾಮಿ ವಿವೇಕಾನಂದರು ಕರ್ಮವು ಶೀಲ ಅಥವಾ ವ್ಯಕ್ತಿತ್ವದ ಮೇಲೆ ಬೀರುವ ಪರಿಣಾಮದ ಕುರಿತು ಹೀಗೆ ಹೇಳುತ್ತಾರೆ: ''ಈ ಪ್ರಪಂಚದಲ್ಲಿ ನಮ್ಮ ಕಣ್ಣಿಗೆ ಬೀಳುವ ಎಲ್ಲ ಕರ್ಮಗಳೂ, ಮಾನವ ಸಮಾಜದಲ್ಲಿ ಆಗುವ ಸಮಸ್ತ ಚಲನೆಗಳೂ, ನಮ್ಮ ಸುತ್ತಲೂ ನಡೆಯುವ ಕಾರ್ಯಗಳು ಕೂಡ ಆಲೋಚನೆಗಳ ಪ್ರದರ್ಶನ, ಮನುಷ್ಯನ ಇಚ್ಛಾಶಕ್ತಿಯ ಅಭಿವ್ಯಕ್ತಿ. ಯಂತ್ರಗಳು, ಸಾಧನಗಳು, ಪಟ್ಟಣಗಳು, ಹಡಗುಗಳು, ಯುದ್ಧನೌಕೆಗಳು ಇವೆಲ್ಲವೂ ಮನುಷ್ಯನ ಇಚ್ಛಾಶಕ್ತಿಯ ಅಭಿವ್ಯಕ್ತಿ ಮಾತ್ರ. ಈ ಇಚ್ಛಾಶಕ್ತಿಗೆ ಮೂಲ, ಶೀಲ. ಈ ಶೀಲವು ಕರ್ಮದ ಮೂಲಕ ರೂಪಗೊಳ್ಳುತ್ತದೆ. ಕರ್ಮ ಹೇಗೋ, ಅದಕ್ಕೆ ಅನುಸಾರವಾಗಿ ಇಚ್ಛಾಶಕ್ತಿಯ ಅಭಿವ್ಯಕ್ತಿ. ಪ್ರಚಂಡ ಇಚ್ಛಾಶಕ್ತಿಯುಳ್ಳವರೆಲ್ಲರೂ ಅದ್ಭುತ ಕರ್ಮಿಗಳು.'' ಉದಾಹರಣೆಗೆ ಇಲ್ಲಿ ಮಹಾಕಾವ್ಯವಾದ ಮಹಾಭಾರತವನ್ನು ಸ್ಮರಿಸಿಕೊಳ್ಳಬಹುದು. ಪಂಚಪಾಂಡವರು ಎಷ್ಟೇ ಕಷ್ಟಗಳು ಬಂದರೂ, ಸನ್ಮಾರ್ಗದಿಂದ ವಿಚಲಿತರಾಗದೆ ಸತ್ಕರ್ಮಗಳನ್ನು ಮಾಡುತ್ತಲೇ ಹೋದರು. ತತ್ಪರಿಣಾಮವಾಗಿ ಅಂತ್ಯದಲ್ಲಿ ಜಯ, ಕೀರ್ತಿ, ರಾಜ್ಯ, ಸ್ವರ್ಗ ಸುಖವು ದೊರಕಿತು. ಆದರೆ ದುಷ್ಟನಾದ ದುರ್ಯೋಧನಾದಿ ಕೌರವರು ತಮ್ಮ ಕುಬುದ್ಧಿಯಿಂದ ಪಾಂಡವರಿಗೆ ಹಿಂಸೆಯನ್ನು, ತೊಂದರೆಯನ್ನು ಕೊಟ್ಟರು. ಅಧರ್ಮದ ಮಾರ್ಗದಲ್ಲಿ ನಡೆದರು. ಕೊನೆಯಲ್ಲಿ ಪರಿಣಾಮವಾಗಿ ಸಂಪತ್ತಿನ ಹಾನಿ, ಅಪಕೀರ್ತಿ ಮತ್ತು ಬಂಧು-ಬಾಂಧವರನ್ನು, ಗುರು-ಹಿರಿಯರನ್ನು ಕಳೆದುಕೊಂಡು ಮೃತ್ಯು ವನ್ನು ಹೊಂದಿದರು. ಇಲ್ಲಿ **ಅವಶ್ಯಮನುಭೋಕ್ತವ್ಯಂ ಕೃತಂ ಕರ್ಮ ಶುಭಾಶುಭಮ್** ಅಂದರೆ ನಾವು ಮಾಡುವ ಒಳ್ಳೆಯ ಅಥವಾ ಕೆಟ್ಟ ಕೆಲಸಗಳ ಫಲವನ್ನು ಅನುಭವಿಸಿಯೇ ತೀರಬೇಕು ಎಂಬ ಮಾತನ್ನು ಸ್ಮರಿಸಿಕೊಳ್ಳಬೇಕು.

ಆದ್ದರಿಂದ ನಾವು ಮಾಡುವ ಪ್ರತಿಯೊಂದು ಕೆಲಸ ಅಥವಾ ಆಲೋಚನೆಯು ನಮ್ಮ ವ್ಯಕ್ತಿತ್ವವನ್ನು ರೂಪಿಸುತ್ತದೆ. ಅಷ್ಟೇ ಅಲ್ಲದೆ ಜನ್ಮ-ಜನ್ಮಾಂತರಗಳಿಂದ ಇದು ನಮ್ಮ ಜೀವನದ ಆಗು-ಹೋಗುಗಳಿಗೆ, ಸುಖ-ದುಃಖಗಳಿಗೆ, ನಮ್ಮ ಜನನ-ಮರಣಕ್ಕೆ ಕಾರಣವಾಗಿದೆ. ಸ್ವಾಮಿ ವಿವೇಕಾನಂದರು ಹೀಗೆ ಹೇಳುತ್ತಾರೆ: ''ಈಗ ನಾವೇನಾಗಿರುವೆವೋ, ಅದು ನಮ್ಮ ಹಿಂದಿನ ಕರ್ಮಗಳ ಫಲವಾಗಿದ್ದರೆ, ಮುಂದೆ ನಾವು ಹೇಗೆ ಆಗಬೇಕೆನ್ನುವುದು ನಮ್ಮ ಈಗಿನ ಇಚ್ಛೆ ಮತ್ತು ಕರ್ಮಗಳ ಮೇಲೆ ಅವಲಂಬಿಸಿರುತ್ತದೆ.''

### ಕರ್ಮಯೋಗ ಎಂದರೇನು?

ಕರ್ಮಿಯು ಸ್ವಾರ್ಥರಹಿತನಾಗಿ, ಫಲಾಪೇಕ್ಷೆಯಿಲ್ಲದೆ ಶ್ರದ್ಧೆ ಯಿಂದ ಮಾಡುವ ಕರ್ಮಗಳ ಮೂಲಕ ಪರಮಪದವನ್ನು ಹೊಂದುತ್ತಾನೆ. ಒಟ್ಟಿನಲ್ಲಿ ''ನಾವು ಮಾಡುವ ಕರ್ಮಗಳನ್ನು ಸ್ವಾರ್ಥರಹಿತರಾಗಿ, ಶ್ರದ್ಧೆಯಿಂದ, ಮತ್ತು ಫಲಾಪೇಕ್ಷೆಯಿಲ್ಲದೆ, ಪರರಿಗೋಸ್ಕರ ಮಾಡಿದಲ್ಲಿ ಅದು 'ಕರ್ಮಯೋಗ' ಎನಿಸಿಕೊಳ್ಳು ತ್ತದೆ.'' ಭಕ್ತನು ಕರ್ಮವನ್ನು ದೇವತಾರ್ಪಣ ಬುದ್ಧಿಯಿಂದ ಮಾಡಿದಾಗ ಅದು ಪೂಜೆ ಅಥವಾ ಕರ್ಮಯೋಗವಾಗುತ್ತದೆ. ಜ್ಞಾನಿಯು ನಾನು ಸತ್-ಚಿತ್-ಆನಂದ ಸ್ವರೂಪನು. ನಿಜವಾಗಿ ನಾನು ಅಕರ್ತ, ಅಭೋಕ್ತ ಎಂದು ಭಾವಿಸುತ್ತಾ ಕರ್ಮ ಮತ್ತು ಅದರಿಂದುಂಟಾಗುವ ಫಲಗಳು ಪ್ರಕೃತಿಗೆ ಸೇರಿದ್ದು ಎಂಬ

ನಿರ್ಲಿಪ್ತ ಭಾವನೆಯಿಂದ ಮಾಡಿದ ಕರ್ಮವು ಕರ್ಮಯೋಗವಾಗುತ್ತದೆ. ಸ್ವಾಮಿ ವಿವೇಕಾನಂದರ ಕರ್ಮಯೋಗದ ಒಂದು ವಿಶಿಷ್ಟತೆಯೆಂದರೆ, 'ನಾಸ್ತಿಕನೂ ಕರ್ಮಯೋಗಕ್ಕೆ ಅಧಿಕಾರಿ' ಎಂದು ತಿಳಿಸುತ್ತಾರೆ! ನಾಸ್ತಿಕನು ಯಾವುದೇ ಫಲಗಳ ಅಪೇಕ್ಷೆಯಿಲ್ಲದೆ ಕರ್ಮಕ್ಕೋಸ್ಕರ ಕರ್ಮವನ್ನು ಮಾಡಿದಾಗ, ಅದೂ ಕರ್ಮಯೋಗವಾಗುತ್ತದೆ.

### ಗೃಹಸ್ಥನಿಗೆ ಕರ್ಮಯೋಗದ ಆವಶ್ಯಕತೆ

ಗೃಹಸ್ಥಧರ್ಮ ಹಾಗೂ ಕರ್ಮಯೋಗದ ಕುರಿತು ಪ್ರತ್ಯೇಕವಾಗಿ ತಿಳಿದೆವು. ಈಗ ಗೃಹಸ್ಥನಿಗೆ ಕರ್ಮಯೋಗದ ಆವಶ್ಯಕತೆ, ಅನಿವಾರ್ಯತೆಯನ್ನು ಕುರಿತು ಸ್ವಲ್ಪ ತಿಳಿದುಕೊಳ್ಳೋಣ.

''ಗೃಹಸ್ಥನಾದವನು ಭಗವದ್ಭಕ್ತನಾಗಿರಬೇಕು, ಭಗವತ್ಸಾಕ್ಷಾತ್ಕಾರವೇ ಅವನ ಜೀವನದ ಗುರಿಯಾಗಿರಬೇಕು. ಹಾಗಿದ್ದರೂ ಅವನು ಎಡಬಿಡದೆ ಕೆಲಸ ಮಾಡಬೇಕು. ತನ್ನ ಕರ್ತವ್ಯಗಳೆಲ್ಲವನ್ನೂ ನಿರ್ವಹಿಸಬೇಕು. ತನ್ನ ಕರ್ಮದ ಫಲವೆಲ್ಲವನ್ನೂ ಭಗವಂತನಿಗೆ ಅರ್ಪಿಸಬೇಕು'' ಎಂದು ಸ್ವಾಮಿ ವಿವೇಕಾನಂದರು ಗೃಹಸ್ಥನಿಗೆ ಕರ್ಮಯೋಗದ ಆವಶ್ಯಕತೆಯನ್ನು ಹೇಳಿದ್ದಾರೆ.

ಮುಂದುವರಿಯುತ್ತಾ, ''ಗೃಹಸ್ಥನು ತನ್ನ ದೇಶಕ್ಕಾಗಿ ಅಥವಾ ತನ್ನ ಧರ್ಮಕ್ಕಾಗಿ ಯುದ್ಧದಲ್ಲಿ ಮಡಿದರೆ, ಯೋಗಿಯು ಧ್ಯಾನದಿಂದ ಯಾವ ಪದವಿಯನ್ನು ಪಡೆಯುವನೊ ಅದನ್ನೇ ಇವನೂ ಹೊಂದಿರುವನು'' ಎಂದೂ ಹೇಳಿದ್ದಾರೆ. ಗೃಹಸ್ಥನು ಸಂಸಾರದಲ್ಲಿ, ಜಗತ್ತಿನಲ್ಲಿ ಹೇಗಿರಬೇಕು ಎಂದು ಹೇಳುವಾಗ ಸ್ವಾಮಿ ವಿವೇಕಾನಂದರು, ''ನಿನ್ನ ಮಕ್ಕಳಿಗೆ ಏನಾದರೂ ಕೊಟ್ಟರೆ ಅದಕ್ಕೆ ಬದಲಾಗಿ ಏನನ್ನಾದರೂ ಕೇಳುವೆಯಾ? ಅವರಿಗಾಗಿ ದುಡಿಯುವುದು ನಿನ್ನ ಕರ್ತವ್ಯವಾಗಿದ್ದು ಅಲ್ಲಿಗೆ ಮುಗಿಯುತ್ತದೆ. ಅದರಂತೆಯೇ ನೀನು ಯಾವ ಮನುಷ್ಯನಿಗೇ ಆಗಲಿ, ನಗರಕ್ಕೇ ಆಗಲಿ, ಸಂಸ್ಥಾನಕ್ಕೇ ಆಗಲಿ ಏನು ಸಹಕಾರ-ಸೇವೆ ಮಾಡಿದರೂ ನೀನು ಏನನ್ನೂ ಹಿಂದಕ್ಕೆ ಪ್ರತಿಫಲವನ್ನು ನಿರೀಕ್ಷಿಸದ ಮನೋವೃತ್ತಿಯವನಾಗು. ಜಗತ್ತಿನಲ್ಲಿ ನಿನ್ನದೆಂದು ನೀನು ಪರಿಗಣಿಸುವ ಎಲ್ಲವೂ ನಿಜವಾಗಿ ದೇವರದೆಂದು ನಂಬಿರು'' ಎನ್ನುತ್ತಾರೆ.

ಸ್ವಾಮಿ ವಿವೇಕಾನಂದರು, ಗೃಹಸ್ಥನು ಒಬ್ಬ ಕರ್ಮಯೋಗಿಯಾಗಿರಬೇಕು, ಅದರ ಔಚಿತ್ಯ, ಆವಶ್ಯಕತೆ, ನಿಲುವು ಏನು? ಎಂದು ಮೇಲಿನ ವಾಕ್ಯಗಳಲ್ಲಿ ಸ್ಪಷ್ಟವಾಗಿ ತಿಳಿಸಿದ್ದಾರೆ. ಮನುಷ್ಯನ ಜನ್ಮದ ಸಫಲತೆ ಆತ್ಮಸಾಕ್ಷಾತ್ಕಾರದಿಂದ ಉಂಟಾಗುತ್ತದೆ. ಅದಕ್ಕೆ ಕರ್ಮಯೋಗ ಚಿತ್ತಶುದ್ಧಿಯನ್ನು ಉಂಟುಮಾಡುತ್ತದೆ ಎಂದು ಸಂಪ್ರದಾಯಸ್ಥ ವೇದಾಂತಿಗಳು ಹೇಳಿದ್ದಾರೆ. ಆದರೆ ಸ್ವಾಮಿ ವಿವೇಕಾನಂದರು ಕರ್ಮಯೋಗದ ಸಹಾಯದಿಂದಲೇ ಒಬ್ಬನು ಆತ್ಮಾನುಭವವನ್ನು ಪಡೆಯಬಹುದು ಎಂದು ಹೇಳಿದ್ದಾರೆ. ಉದಾಹರಣೆಗೆ ಜನಕ, ಅಂಬರೀಶ, ಮುಂತಾದ ಮಹಾರಾಜರ ಹೆಸರುಗಳನ್ನು ಸ್ವಾಮೀಜಿ ಉಲ್ಲೇಖಿಸಿದ್ದಾರೆ.

ಸ್ವಾಮೀಜಿ ಕರ್ಮಯೋಗದ ಉಪನ್ಯಾಸದಲ್ಲಿ ಕರ್ತವ್ಯದ ಕುರಿತು ಮಾತನಾಡುವಾಗ ಕಥೆಯೊಂದನ್ನು ಹೇಳುತ್ತಾರೆ:

ಯುವ ಸಂನ್ಯಾಸಿಯೊಬ್ಬನು ಅರಣ್ಯದಲ್ಲಿ ೧೨ವರ್ಷಗಳ ಕಾಲ ಕಠಿಣ ಬ್ರಹ್ಮಚರ್ಯ ವ್ರತವನ್ನು ಪಾಲಿಸುತ್ತಾ ತಪಸ್ಸನ್ನು ಆಚರಿಸಿದನು. ಹೀಗೆ ಒಂದು ದಿವಸ ಮರದ ಕೆಳಗೆ ಕುಳಿತಿದ್ದನು. ಮರದಿಂದ ಒಣಗಿದ ೨-೩ ಎಲೆಗಳು ಅವನ ಮೇಲೆ ಬಿದ್ದವು. ಆ ಸಂನ್ಯಾಸಿಯು ಮರದ ಮೇಲೆ ನೋಡಲು, ಕಾಗೆ ಹಾಗೂ ಕೊಕ್ಕರೆ ಜಗಳವಾಡುತ್ತಿದ್ದವು. ಅದರಿಂದ ಒಣಗಿದ ಎಲೆಗಳು ಬಿದ್ದವು. ಕೋಪದಿಂದ ಸಂನ್ಯಾಸಿಯು 'ನಿಮಗೆಷ್ಟು ಧೈರ್ಯ?' ಎಂದು ಅವುಗಳ ಮೇಲೆ ದೃಷ್ಟಿ ಹರಿಸಿದನು. ಸಂನ್ಯಾಸಿಯ ತಪಶ್ಶಕ್ತಿಯ ಪ್ರಭಾವ, ಅವನ ಹಣೆಯಿಂದ ಅಗ್ನಿಜ್ವಾಲೆ ಹೊರಟು ಆ ಪಕ್ಷಿಗಳನ್ನು ಭಸ್ಮಮಾಡಿಬಿಟ್ಟಿತು. ತನ್ನ ತಪಶ್ಶಕ್ತಿಯಿಂದ ಸಂತೋಷಭರಿತನೂ, ಅಹಂಕಾರಿಯೂ ಆದ ಆ ಸಂನ್ಯಾಸಿ ಮಾರನೆಯ ದಿವಸ ಸಮೀಪದಲ್ಲಿದ್ದ ಹಳ್ಳಿಗೆ ಭಿಕ್ಷೆಗೆಂದು ಹೋದ. ಮನೆಯೊಂದರ ಮುಂದೆ ನಿಂತು ಆ ಸಂನ್ಯಾಸಿಯು ''ಭವತಿ ಭಿಕ್ಷಾಂ ದೇಹಿ'' ಎಂದನು. ಮನೆಯ ಒಳಗಿನಿಂದ ಮಹಿಳೆಯೊಬ್ಬಳು, ''ಅಯ್ಯ! ಕೊಂಚ ತಾಳು'' ಎಂದಳು. ಸಂನ್ಯಾಸಿಯು ಕೋಪದಿಂದ, ''ಎಲಾ ಸ್ತ್ರೀಯೆ! ನನ್ನನ್ನು ಕಾಯಿಸುವುದಕ್ಕೆ ನಿನಗೆಷ್ಟು ಧೈರ್ಯ! ನನ್ನ ಶಕ್ತಿಯನ್ನು ನೀನಿನ್ನೂ ಅರಿಯೆಯ?'' ಎಂದು ತನ್ನೊಳಗೆ ಹೇಳಿಕೊಳ್ಳುತ್ತಿದ್ದನು. ಅದೇ ಮಹಿಳೆಯು ಮನೆಯೊಳಗಿನಿಂದಲೇ ''ಎಲಾ ಹುಡುಗ! ನಿನಗೆಷ್ಟು ಗರ್ವ! ಆ ಕಾಗೆ ಕೊಕ್ಕರೆಗಳ ವಿಷಯವೆಂದು ತಿಳಿದುಕೊಂಡಿದ್ದೀಯೇನು?'' ಎಂದು ಕೂಗಿದಳು. 'ತನ್ನ ಮನದೊಳಗಿನ ಮಾತು, ಮನೆಯೊಳಗಿರುವ ಗೃಹಿಣಿಗೆ ಹೇಗೆ ತಿಳಿಯಿತು' ಎಂದು ಸಂನ್ಯಾಸಿಗೆ ಆಶ್ಚರ್ಯವುಂಟಾಯಿತು. ಆ ಗೃಹಿಣಿ ಭಿಕ್ಷೆಯನ್ನು ನೀಡಲು ಹೊರಗೆ ಬಂದಾಗ, ಸಂನ್ಯಾಸಿಯು ಗೃಹಿಣಿಯನ್ನು ಕುರಿತು, ''ನನ್ನ ಮನದೊಳಗಿನ ಮಾತು ನಿಮಗೆ ಹೇಗೆ ತಿಳಿಯಿತು?'' ಎಂದು ಪ್ರಶ್ನಿಸಿದನು. ಗೃಹಿಣಿಯು ನಸುನಗುತ್ತಾ, ''ಮಗು, ನನಗೆ ನಿನ್ನ ಯೋಗಾಭ್ಯಾಸಗಳು ತಿಳಿದಿಲ್ಲ, ನಾನೊಬ್ಬಳು ಸಾಮಾನ್ಯ ಮಹಿಳೆ. ತವರುಮನೆಯಲ್ಲಿದ್ದಾಗ, ಮಗಳಾಗಿ ನನ್ನ ತಂದೆ-ತಾಯಿಯರ ಸೇವೆ ಮಾಡಿದೆ. ವಿವಾಹವಾದ ಮೇಲೆ ನನ್ನ ಯಜಮಾನ ಅಸ್ವಸ್ಥನಾಗಿದ್ದರಿಂದ ಮನಃಪೂರ್ವಕವಾಗಿ ಅವನ ಸೇವೆ ಮಾಡಿದೆ. ಗೃಹಿಣಿಯಾಗಿ ನನ್ನ ಕೈಯ್ಯಲ್ಲಾಗುವ ಮಟ್ಟಿಗೆ ನನ್ನ ಕರ್ತವ್ಯಗಳನ್ನು ಸಮರ್ಪಕವಾಗಿ ಮಾಡಿದ್ದೇನೆ. ಇದೇ ನಾನು ಅಭ್ಯಾಸ ಮಾಡಿರುವ ಯೋಗ. ಇದರಿಂದಲೇ ನನಗೆ ನಿನ್ನ ಮನಸ್ಸಿನಲ್ಲಿ ನಡೆಯುತ್ತಿದ್ದ ಆಲೋಚನೆಗಳು, ನಿನ್ನೆ ನಡೆದ ಘಟನೆಯ ಕುರಿತು ತಿಳಿಯಿತು'' ಎಂದಳು. ಹೀಗೆ ಆ ಗೃಹಿಣಿಯು ಯಾವುದೇ ಫಲಾಪೇಕ್ಷೆಯಿಲ್ಲದೆ, ತನ್ನ ಪಾಲಿಗೆ ಬಂದ ಕರ್ತವ್ಯಗಳನ್ನು ಮಾಡಿದ್ದರಿಂದ, ಸಂನ್ಯಾಸಿಯು ತಪಸ್ಸಿನ ಮೂಲಕ ಏನನ್ನು ಪಡೆದಿದ್ದನೋ, ಅದನ್ನೇ ಆ ಗೃಹಿಣಿಯು

ಪಡೆದಿದ್ದಳು. ಹೀಗೆ ಗೃಹಸ್ಥರು ಕರ್ಮಯೋಗವನ್ನು ಅನುಷ್ಠಾನಕ್ಕೆ ತಂದಾಗ, ಆತ್ಮಸಾಕ್ಷಾತ್ಕಾರ ದೊರೆಯುತ್ತದೆ. ಅಲ್ಲದೆ ಕರ್ಮ ಯೋಗದಿಂದ, ಅವರ ಕರ್ಮಬಂಧನಗಳು, ಕಲ್ಮಶಗಳು, ಭಾವ ನೆಯ ಏರಿಳಿತಗಳು ಮುಂತಾದವುಗಳನ್ನು ನೀಗಿಸಬಹುದು. ಗೃಹಸ್ಥರು ಕೂಡ ಸತ್ಯಾನುಭವವನ್ನು ಪಡೆಯಬಹುದು. ಅಲ್ಲದೆ ಇಂತಹ ಮನೋಭಾವದಿಂದ ನಿಜವಾದ ಅರ್ಥದಲ್ಲಿ ನಾವು ಸಮಾಜಸೇವೆಯನ್ನು ಮಾಡಲು ಸಾಧ್ಯ. ಮನಸ್ಸನ್ನು ನಿಯಂ ತ್ರಣದಲ್ಲಿಟ್ಟುಕೊಂಡು ಮಹತ್ತರ ಕೆಲಸಗಳನ್ನು ಕರ್ಮಯೋಗ ದಿಂದ ಮಾಡಬಹುದು. ಏಕೆಂದರೆ, ಸಮಾಜದಲ್ಲಿ ನಡೆಯುವ, ನಡೆಯುತ್ತಿರುವ ಅನಾಹುತಗಳಿಗೆ ಸ್ವಾರ್ಥವೇ ಕಾರಣ. ಇದ ರಿಂದ ಅನೇಕ ಯುದ್ಧಗಳೇ ನಡೆದು ಹೋಗಿವೆ. ಸಮಾಜವನ್ನು ಸ್ವಾರ್ಥ ಕುರೂಪಗೊಳಿಸಿದೆ. ಇದರಿಂದಲೇ ಒಬ್ಬರು ಇನ್ನೊಬ್ಬ ರನ್ನು ಹತ್ತಿಕ್ಕುವ ಹುನ್ನಾರ ನಡೆಯುತ್ತಲೇ ಇದೆ. ಕರ್ಮಯೋಗದ ಅಭ್ಯಾಸದಿಂದ ಸ್ವಾರ್ಥದ ತ್ಯಾಗ, ಅನಾಸಕ್ತಿ ಉಂಟಾಗುತ್ತದೆ. ಅಂತಹ ವ್ಯಕ್ತಿ ಮಾತ್ರ ನಿಜವಾಗಲೂ ಸಮಾಜಕ್ಕೆ, ದೇಶಕ್ಕೆ ಏನಾ ದರೂ ಒಳ್ಳೆಯದನ್ನು ಮಾಡಲು ಸಾಧ್ಯ.

ಆದ್ದರಿಂದಲೇ ಸ್ವಾಮಿ ವಿವೇಕಾನಂದರು ಕರ್ಮಯೋಗಿ ಯನ್ನು ಕುರಿತು ಹೀಗೆ ಹೇಳುತ್ತಾರೆ: ''ಪರಮಯೋಗಿಗೆ ಯಾವ ಗತಿ ಪ್ರಾಪ್ತವಾಗುವುದೋ ಆ ಗತಿಯೇ ಕೆರೆ ಕಟ್ಟಿಸುವುದ ರಿಂದಲೂ, ರಸ್ತೆಗಳ ಪಕ್ಕದಲ್ಲಿ ಸಸಿ ನೆಡಿಸುವುದರಿಂದಲೂ, ಮನು ಷ್ಯರ ಹಾಗೂ ಪ್ರಾಣಿಗಳ ವಿಶ್ರಾಂತಿಗಾಗಿ ಛತ್ರವನ್ನು ಕಟ್ಟಿಸು ವುದರಿಂದಲೂ, ರಸ್ತೆ ಮಾಡಿಸುವುದರಿಂದಲೂ, ಸೇತುವೆಗಳನ್ನು ಕಟ್ಟಿಸುವುದರಿಂದಲೂ ಗೃಹಸ್ಥನಿಗೆ ಉಂಟಾಗುತ್ತದೆ.''

### ಉಪಸಂಹಾರ

ಗೃಹಸ್ಥ ಅಥವಾ ಸಂನ್ಯಾಸಿ ಇಬ್ಬರಲ್ಲಿ ಯಾರು ಶ್ರೇಷ್ಠರು? ಎಂದು ಯಾರಾದರು ಕೇಳಿದರೆ, ನಮ್ಮ ಶಾಸ್ತ್ರಗಳು ಅವರವರ ಸ್ಥಾನದಲ್ಲಿ ಇಬ್ಬರೂ ಶ್ರೇಷ್ಠರೇ ಎಂದು ಸಾರಿವೆ. ಶ್ರೇಷ್ಠ ಗೃಹಸ್ಥ ನಾಗುವುದು ಶ್ರೇಷ್ಠ ಸಂನ್ಯಾಸಿ ಆಗುವುದಕ್ಕಿಂತಲೂ ಕಷ್ಟಕರ. ಏಕೆಂದರೆ ಕೋಟೆ ಒಳಗೆ ಇದ್ದು ಹೋರಾಡುವ ಜೀವನ ಸಂನ್ಯಾಸಿ ಯದು. ಅದು ಹೆಚ್ಚು ಸುರಕ್ಷಿತ. ಬಯಲು ಪ್ರದೇಶದಲ್ಲಿ ಯುದ್ಧ ಮಾಡುವುದು ಬಹಳ ಅಪಾಯಕಾರಿ. ಯಾವ ಕ್ಷಣದಲ್ಲಿ ಯಾವ ದಿಕ್ಕಿನಿಂದ ಬಾಣವು ಬಂದು ಹೊಡೆಯುತ್ತದೆಯೋ ಸೈನಿಕನಿಗೆ ತಿಳಿಯದು. ಅಂತಹ ಹೋರಾಟದ ಜೀವನ ಗೃಹಸ್ಥನ ಜೀವನ. ಆದ್ದರಿಂದ ಅವನ ಜೀವನ ಕಷ್ಟಕರ ಅಂದರೆ ಅತಿಶ ಯೋಕ್ತಿಯಾಗಲಾರದು. ಬ್ರಹ್ಮಚಾರಿ, ವಾನಪ್ರಸ್ಥ, ಸಂನ್ಯಾಸಿಗಳು ಬರುವುದು ಗೃಹಸ್ಥನಿಂದಲೇ. ಆದ್ದರಿಂದ ಗೃಹಸ್ಥನು ಸಮಾಜದ ತಳಹದಿ. ವರ್ಣಾಶ್ರಮಗಳಲ್ಲಿ ಗೃಹಸ್ಥನನ್ನು ಹೊರತುಪಡಿಸಿ, ಇನ್ನು ಉಳಿದ ಆಶ್ರಮದವರು ಸಂಪಾದನೆಯನ್ನು ಮಾಡುವು ದಿಲ್ಲ. ಆದ್ದರಿಂದ ಆ ಮೂರು ಆಶ್ರಮದವರು ಗೃಹಸ್ಥನ ಮೇಲೆ ನಿರ್ಭರರಾಗಿರುತ್ತಾರೆ.

ಗೃಹಸ್ಥನು ತನ್ನ ಆಧ್ಯಾತ್ಮಿಕ ಸಾಧನೆಗಳ ಜೊತೆ ಜೊತೆಗೆ ಪ್ರಪಂಚದಲ್ಲಿ ಕೆಲಸಗಳನ್ನು ಮಾಡಲೇಬೇಕು. ಅದನ್ನು ಅವನು ಬರೀ ಕರ್ಮವಾಗಿ ಮಾಡಿದರೆ ಅದು ಅವನಿಗೆ ಹೊರೆಯಾಗುತ್ತದೆ. ಅಂತಹ ಕರ್ಮ ಅವನನ್ನು ಬಂಧಿಸುತ್ತದೆ. ಅದೇ ಕರ್ಮವನ್ನು ನಿಷ್ಕಾಮಭಾವನೆಯಲ್ಲಿ ಮಾಡಿದಾಗ ಅದು ಅವನನ್ನು ಬಂಧಿ ಸುವುದಿಲ್ಲ; ಅವನನ್ನು ಮುಕ್ತನನ್ನಾಗಿ ಮಾಡುತ್ತದೆ. ಅದರಿಂದ ಇನ್ನೂ ಹೆಚ್ಚಾಗಿ ಕರ್ಮಗಳನ್ನು ನೇರವೇರಿಸುವುದಕ್ಕೆ ಸಾಧ್ಯವಾಗು ತ್ತದೆ. ಅಂತಹವರು ಸುಲಭವಾಗಿ ಮಹಾನ್ ಕಾರ್ಯಗಳನ್ನು ಮಾಡಬಲ್ಲವರಾಗುತ್ತಾರೆ. ಗೃಹಸ್ಥನು ಕರ್ಮಯೋಗಿಯಾಗು ವುದರಿಂದ ಅವನಿಗೂ ಲಾಭ. ಅಂತಹ ಮನಃಸ್ಥಿತಿಯಿಂದ ಮಾಡುವ ಕರ್ಮವು ನಿಜವಾಗಲೂ ಸಮಾಜಕ್ಕೆ, ದೇಶಕ್ಕೆ ಒಳಿತು ಮಾಡುತ್ತದೆ. ಆದುದರಿಂದ ಗೃಹಸ್ಥ ಹಾಗೂ ಕರ್ಮಯೋಗದ ನಡುವೆ ಅವಿನಾಭಾವ ಸಂಬಂಧವಿದೆ.



## ಗೃಹಸ್ಥ ಜೀವನಕ್ಕೆ ಶ್ರೀಮಾತೆ ಶಾರದಾದೇವಿಯವರ ಹಿತನುಡಿಗಳು

ಎಲ್ಲರನ್ನೂ ಸಮಾನವಾಗಿ ಪ್ರೀತಿಸುವುದು ಹೇಗೆ ಎಂದು ಹೇಳುತ್ತೇನೆ, ಕೇಳು. ನೀನು ಯಾರನ್ನು ಪ್ರೀತಿಸುತ್ತೀಯೋ ಅವರಿಂದ ಏನನ್ನೂ ನಿರೀಕ್ಷಿಸಬಾರದು. ನೀನು ಏನನ್ನಾದರೂ ನಿರೀಕ್ಷಿಸಿದರೆ, ಆಗ ನೀನು ಹೆಚ್ಚು ಕೊಟ್ಟವರನ್ನು ಹೆಚ್ಚು ಪ್ರೀತಿಸುತ್ತೀಯೆ. ಕಡಿಮೆ ಕೊಟ್ಟವರನ್ನು ಕಡಿಮೆ ಪ್ರೀತಿಸುತ್ತೀಯೆ. ಹೀಗೆ ನೀನು ಎಲ್ಲರನ್ನೂ ಸಮಾನವಾಗಿ ಪ್ರೀತಿಸಲು ಆಗುವುದಿಲ್ಲ.

ಪ್ರೀತಿ ಏನನ್ನು ಬೇಕಾದರೂ ಸಾಧಿಸಬಲ್ಲುದು. ಬಲವಂತವಾಗಿಯೋ ಅಥವಾ ಸುತ್ತುಬಳಸು ವಿಧಾನದಿಂದಲೋ ಯಾರನ್ನೂ ನೀನು ಹೇಳಿದಂತೆ ಕೇಳುವ ಹಾಗೆ ಮಾಡಲು ಸಾಧ್ಯವಿಲ್ಲ.

ಒಂದು ವಸ್ತು ಎಷ್ಟೇ ಕ್ಷುಲ್ಲಕವೆನಿಸಿದರೂ ಅದನ್ನು ಅಲಕ್ಷ್ಯ ಮಾಡಬಾರದು. ಪ್ರತಿಯೊಂದಕ್ಕೂ ಅದಕ್ಕೆ ಸಲ್ಲಬೇಕಾದ ಗೌರವ ವನ್ನು ಸಲ್ಲಿಸಬೇಕು. ಒಂದು ಪೊರಕೆಯನ್ನೂ ಗೌರವದಿಂದ ಕಾಣಬೇಕು. ತೀರ ಸಣ್ಣ ಕೆಲಸವನ್ನೂ ಕೂಡ ಗೌರವದಿಂದ ಮಾಡಬೇಕು.

ಈ ಜಗತ್ತು ಭಗವಂತನದು. ಅವನು ನಮ್ಮನ್ನು ಎಲ್ಲೇ ಇಡಲಿ, ಏನೇ ಮಾಡಲಿ ನಾವು ಅದನ್ನು ಸಮಾಧಾನದಿಂದ ತೆಗೆದುಕೊಳ್ಳಬೇಕು. ಶ್ರದ್ಧಾಭಕ್ತಿಗಳಿಂದ ನಾವು ಸಂಪೂರ್ಣ ಭಗವಂತನಲ್ಲಿ ಶರಣಾಗಬೇಕು. *('ಶ್ರೀನುಡಿ' ಪುಸ್ತಕದಿಂದ)*